ಶ್ರೀ ಮಲ್ಲಿಕಾರ್ಜುನಪ್ಪಗೌಡ.—ಮೊದಲು ಇದನ್ನು ಏರ್ಪಾಡು ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಇದು ನಮ್ಮ ಸರ್ಕಾರ ಮಾತ್ರ ತೀರ್ಮಾನ ಮಾಡುವ ಹಾಗಿಲ್ಲ, ಬೊಂಬಾಯಿ ಸರ್ಕಾರದವರೂ ಒಪ್ಪಬೇಕು.

ಶ್ರೀ ವೈ. ಎಂ. ಚೆಂದ್ರಶೇಖರಯ್ಯ.—ಈ ಸೇತುವೆ ಪ್ರಾಮುಖ್ಯವಾದುದೆಂಬುದು ಮರಾಮತ್ತು ಇಲಾಖೆಯವರಿಗೆ ಗೊತ್ತಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಗೊತ್ತಿದೆ.

Channel from Garudachala river to feed Thogarighatta and Chikkanahalli Tanks of Holavanahalli Hobli.

Q.—909. Sri MUDDURAMIAH (Koratagere-Madhugiri).—

Will the Government be pleased to state.—

(*a*) whether an estimate has been prepared for digging a channel from the river Garudachala near Shakunithimmanahalli to feed the Thogarighatta and Chikkanahalli tanks of Holavanahalli Hobli of Koratagere Taluk ;

(*b*) if so, the amount of the estimate ?

A.—Sri Kadidal MANJAPPA (Minister for Revenue and Public Works).—

(*a*) No.

(*b*) Does not arise in view of answer to (*a*).

ಶ್ರೀ ಮುದ್ದುರಾಮಯ್ಯ.—ಕಳೆದ ಅಧಿವೇಶನದಲ್ಲಿ ಇದೇ ತರಹ ಪ್ರಶ್ನೆ ನಾನು ಹಾಕಿದಾಗ ಪರಿಶೀಲಿಸುತ್ತೇವೆಂದು ಹೇಳಿತ್ತು. ಹಾಗೆ ಪರಿಶೀಲನೆಗೆ ಎಷ್ಟು ಕಾಲ ಬೇಕಾಗುತ್ತದೆ ?

ಶ್ರೀ ಕಡಿದಾಳ್ ಮಂಜಪ್ಪ.—ಇದನ್ನು ಪರಿಶೀಲನೆ ಮಾಡಿದ್ದಾರೆ. ಎಸ್ಟಿಮೇಟ್ ಮಾಡಿ ಪರಿಶೀಲಿಸಿದ್ದರಲ್ಲಿ ಇದನ್ನು ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲವೆಂದು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ.

ಶ್ರೀ ಮುದ್ದುರಾಮಯ್ಯ.—ನಾನು ಕೇಳಿರುವ ಪ್ರದೇಶದಿಂದ ಪರಿಶೀಲನೆ ನಡೆಸಿಲ್ಲ, ಬೇರೆ ಕಡೆಯಿಂದ ಪರಿಶೀಲಿಸಿ ಇದು ಆಗುವುದಿಲ್ಲವೆಂದು ಅಭಿಪ್ರಾಯ ಪಟ್ಟಿದ್ದಾರೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿಲ್ಲ.

ಶ್ರೀ ಮುದ್ದುರಾಮಯ್ಯ.—ನಾನು ಕೇಳಿರುವ ಪ್ರದೇಶದಿಂದ ಪರಿಶೀಲನೆಗೆ ತಾವು ಏರ್ಪಾಡು ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ತಾವು ಪ್ರಶ್ನೆಯಲ್ಲಿ ಯಾವ ಪ್ರದೇಶವನ್ನು ನಮೂದು ಮಾಡಿದ್ದೀರೋ ಅದೇ ಪ್ರದೇಶದಿಂದ ಪರಿಶೀಲಿಸಿದ್ದಾರೆಂದು ಸರ್ಕಾರಕ್ಕೆ ವರದಿ ಬಂದಿದೆ.

ಶ್ರೀ ಮುದ್ದುರಾಮಯ್ಯ.—ಆ ರೀತಿ ಆಗಿಲ್ಲ ವೆಂಬುದು ನನಗೆ ಗೊತ್ತಿದೆ. ಆದ್ದರಿಂದ ಮತ್ತೊಮ್ಮೆ ಪರಿಶೀಲನೆಗೆ ಅವಕಾಶ ಕಲ್ಪಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ನನಗೆ ವಿವರಗಳನ್ನು ತಾವು ಪತ್ರ ಬರೆದು ತಿಳಿಸಿದರೆ ಪುನಃ ಪರಿಶೀಲಿಸುತ್ತೇನೆ.

Deputy Trade Agent in London.

Q.—734. Sri M. CHIKKALINGIAH (Malavalli—Scheduled Castes).—

Will the Government be pleased to state.—

(*a*) whether there was a vacancy in the office of the Deputy Trade Agent in London ;

(*b*) if so, whether the same has been filled up and by whom ?

A.—Sri H. SIDDAVEERAPPA (Minister for Home and Industries).—

(*a*) and (*b*) Consequent on the retirement of Sri R. K. Murthy with effect from 31st December 1954, the post of Deputy Trade Agent became vacant. It is not proposed to continue this post. Instead, the post of a Manager for the Trade Agent's Office has been sanctioned on a remuneration of £ 550 per annum for a period of two years and Sri M. Ramachandra Rao, M.A., has been appointed to this newly created post.

ಶ್ರೀ ಎಂ. ಚಿಕ್ಕಲಿಂಗಯ್ಯ.—ಡೆಪ್ಯುಟಿ ಟ್ರೇಡ್ ಏಜೆಂಟರು ಹಿಂದೆ ಯಾರಿದ್ದರೋ ಅವರ ನಂಬಳವೇನು ?

ಶ್ರೀ ಎಚ್ ಸಿದ್ಧವೀರಪ್ಪ.—750 ಪೌಂಡುಗಳು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈಗ ಕಡಮೆ ಮಾಡಿರುವುದರಿಂದ ಆ ಜಾಗಕ್ಕೆ ಹೋಗುವವರಿಗೆ ಸ್ಪೆಷಲ್ ಡಿಸ್‌ಕರೇಜ್‌ಮೆಂಟ್ ಆಗಿ ದಕ್ಷತೆ ಕಡಮೆಯಾಗುತ್ತದೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎಚ್. ಸಿದ್ಧವೀರಪ್ಪ.—ಈಗ ಡೆಪ್ಯುಟಿ ಟ್ರೇಡ್ ಏಜೆಂಟರಿಗೆ ಬದಲಾಗಿ ಒಬ್ಬ ಮ್ಯಾನೇಜರನ್ನು ನೇಮಿಸಲಾಗಿದೆ. ಹಿಂದೆ ಇದ್ದವರು 20-30 ವರ್ಷ ಆ ಸಂಸ್ಥೆಯಲ್ಲಿ ದುಡಿದಿದ್ದರಿಂದ ಅವರಿಗಾಗಿ ಸ್ಪೆಷಲ್ಲಾಗಿ ಡೆಪ್ಯುಟಿ ಟ್ರೇಡ್ ಏಜೆಂಟರ ಹುದ್ದೆಯನ್ನು ಎರಡು ವರ್ಷಕ್ಕೆ ಮಾತ್ರ ಕ್ರಿಯೇಟ್ ಮಾಡಿದ್ದೆವು.

ಶ್ರೀ ಎಂ. ಚಿಕ್ಕಲಿಂಗಯ್ಯ.—ರಾಮಚಂದ್ರ ರಾಯರು ಇಂಡಸ್ಟ್ರೀಸ್ ಇಲಾಖೆಯಲ್ಲಿದ್ದವರೆ ಅಥವಾ ಹೊರಗಡೆಯಿಂದ ಕರೆಸಲ್ಪಟ್ಟವರೆ ?

ಶ್ರೀ ಎಚ್ ಸಿದ್ಧವೀರಪ್ಪ.—ಇದುವರೆಗೆ ಅವರು ಸರ್ಕಾರದ ಇಲಾಖೆಯಲ್ಲಿರಲಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಅವರು ಇಂಡಸ್ಟ್ರಿಯಲ್ ಇಲಾಖೆಯಲ್ಲಲ್ಲದಿರುವಾಗ ಈ ಕೆಲಸಕ್ಕೆ ಅವರನ್ನು ಯಾವ ಆಧಾರದ ಮೇಲೆ ನೇಮಿಸಿಕೊಂಡಿರಿ ?